# ನಮ್ಮ ಜನ
NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 266 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 13–05–2024 ಸೋಮವಾರ | ಪುಟ: 4 | ಬೆಲೆ : ರೂ.2–00
Volume - 01 Issue - 266 | Title- Code: KARKAN 28269 | Chitradurga | Date: 13-05-2024 Monday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಪಕ್ಷಿಗಳಿಗೆ ನೀರುಣಿಸುವ ಕಾಯಕಕ್ಕೆ ತನ್ನನ್ನು ತಾನೇ ತೊಡಗಿಸಿಕೊಂಡಿರುವ ಅಪಿಕಾ 2

ಮಳೆ ಗಾಳಿಗೆ ಮನೆಗಳ ಮೇಲೆ ಬಿದ್ದ ಶಾಲಾ ಕಟ್ಟಡದ ಶೀಟ್ 3

ಮಾನವೀಯತೆಯ ಭಾವದ ನೆಲೆಯೆ ಬಸವಣ್ಣನವರ ವಚನಗಳು 4



ಸುದ್ದಿ, ಜಾಹಿರಾತಿಗೆ 9686622252


**ಶುಭ ನುಡಿ**

ಬಟ್ಟೆ ನೋಡಿ ಗೆಳೆತನ ಮಾಡಬೇಡ, ಗುಣ ನೋಡಿ ಗೆಳೆತನ ಮಾಡು , ಯಾಕೆಂದರೆ ಬಟ್ಟೆ ಹರಿದು ಹೋಗುವ ತನಕ ಮಾತ್ರ ಇರುತ್ತದೆ, ಗುಣ ಸಾಯುವವರೆಗೂ ಇರುತ್ತದೆ !!

» ಶುಭೋದಯ

# ಸನಾತನ ಧರ್ಮದ ತತ್ವಜ್ಞಾನ ಜಗತ್ತಿಗೆ ಸಾರಿದ ಶಂಕರಾಚಾರ್ಯರು: ಎಸಿ ಕಾರ್ತಿಕ್ ಹೇಳಿಕೆ

» ಚಿತ್ರದುರ್ಗ

ಬುದ್ದ ಹಾಗೂ ಜೈನ ಧರ್ಮಗಳ ಪ್ರಭಾವದಿಂದ ಸನಾತನ ಧರ್ಮವನ್ನು ಮೇಲೆತ್ತಿ, ಸನಾತನ ಧರ್ಮದ ಉನ್ನತ ತತ್ವಜ್ಞಾನವನ್ನು ಜಗತ್ತಿಗೆ ಸಾರುವ ಕೆಲಸವನ್ನು ಆದಿಗುರು ಶಂಕರಾಚಾರ್ಯರು ಮಾಡಿದರು ಎಂದು ಉಪವಿಭಾಗಾಧಿಕಾರಿ ಎಂ.ಕಾರ್ತಿಕ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ಆಯೋಜಿಸಲಾದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಬುದ್ದ ಹಾಗೂ ಜೈನ ಧರ್ಮಗಳು ತಮ್ಮ ವಿಶಿಷ್ಟ ತತ್ವಗಳಿಂದಾಗಿ ಭಾರತ ಹಾಗೂ ಬೇರೆ ದೇಶಗಳಲ್ಲಿಯೂ ಮನ್ನಣೆ ಗಳಿಸಿದ್ದವು. ಬುದ್ಧ ಧರ್ಮ ಏಷ್ಯಾದ ಹಲವು ದೇಶಗಳಿಗೂ ಹಬ್ಬಿತ್ತು. ಇದರ ಜೊತೆಗೆ ಸನಾತನ ಧರ್ಮದಲ್ಲಿ ಶೈವ, ವೈಷ್ಣವ, ಶಕ್ತಿ, ಗಣೇಶ ಹಾಗೂ ಸೂರ್ಯನ ಆರಾಧಕ ಪಂಥಗಳು ಇದ್ದವು. ಇವುಗಳ ಭಿನ್ನತೆಯಿಂದಾಗಿ ಸನಾತನ ಧರ್ಮ ಮಂಕಾಗಿತ್ತು. ಶಂಕರಾಚಾರ್ಯರು ಈ ಎಲ್ಲಾ ಪಂಥಗಳನ್ನು ಒಗ್ಗೂಡಿಸಿ ಸನಾತನ ಧರ್ಮಕ್ಕೆ ಪುನಶ್ಚೇತನ ನೀಡಿದರು. ಅದ್ವೈತ



ಸಿದ್ದಾಂತ ಪ್ರತಿಪಾದಿಸಿದರು ಎಂದು ಉಪವಿಭಾಗಧಿಕಾರಿ ಎಂ.ಕಾರ್ತಿಕ್ ಹೇಳಿದರು. ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಪಿ.ಎಸ್.ಮಂಜುನಾಥ ಮಾತನಾಡಿ, ಶಂಕರಾಚಾರ್ಯರು 1300 ವರ್ಷಗಳ ಹಿಂದೆ ಜನಿಸಿದರು. ಐದನೇ ವರ್ಷಕ್ಕೆ ಉಪನಯನ ನಂತರ ಸನ್ಯಾಸ ಸ್ವೀಕರಿಸಿ, ಅಖಂಡ ಭಾರತವನ್ನು 3 ಬಾರಿ ಪ್ರದಕ್ಷಣೆ ಹಾಕಿ ಹಿಂದೂ ಧರ್ಮದ ಪುನರುಜ್ಜೀವನಗೊಳಿಸಿದರು. ಈ ಕಾರಣದಿಂದಲೇ ಇಂದಿಗೂ ಭಾರತದಲ್ಲಿ ಸನಾತನ ಹಿಂದೂ ಧರ್ಮದ ಉಳಿದುಕೊಂಡು ಬಂದಿದೆ. ಶಂಕರಾಚಾರ್ಯರು ಜ್ಞಾನಕ್ಕೆ ಹೆಚ್ಚಿನ ಒತ್ತುಕೊಟ್ಟು ನಹಿಃ ಜ್ಞಾನೇನ ಸದೃಶಂ ಎಂದು ಹೇಳಿದರು. ಅಹಂ ಬ್ರಹ್ಮಾಸ್ಮೀ ಎಂಬ ತತ್ವದ ಮೂಲಕ ನಮ್ಮಲ್ಲೇ ನಾವು ದೈವತ್ವನ್ನು ಕಾಣಬೇಕು ಎಂದು ತಿಳಿಸಿದರು. ಇದರೊಂದಿಗೆ ಹಲವು ಗ್ರಂಥಗಳ ಮೇಲೆ ಭಾಷ್ಯಗಳನ್ನು ರಚಿಸಿದರು. ಅವರ ರಚಿಸಿದ ಸ್ತುತಿಗಳು ಇಂದಿಗೂ ಜನಮಾನಸದಲ್ಲಿವೆ ಎಂದರು.

ಚಿತ್ರದುರ್ಗ ತಹಶೀಲ್ದಾರ್ ಡಾ.ನಾಗವೇಣಿ ಮಾತನಾಡಿ ಅದ್ವೈತ ಸಿದ್ದಾಂತ ಜೊತೆಗೆ ದೇಶದ ನಾಲ್ಕು ಮೂಲೆಗಳಲ್ಲಿಯೂ ನಾಲ್ಕು ಮಠಗಳನ್ನು ಸ್ಥಾಪಿಸಿ ಹಿಂದೂ ಧರ್ಮವನ್ನು ಪುನಶ್ಚೇತನಗೊಳಿಸಿದರು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ರಂಗನಿರ್ದೇಶಕ ಕೆ.ಪಿ.ಎಂ.ಗಣೇಶಯ್ಯ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿ ಕೆ.ಪಿ.ಎಂ.ಗುರುದೇವ್ ಭಕ್ತಿಗೀತೆ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ಆಹಾರ ಇಲಾಖೆ ಸಹಾಯಕ ನಿರ್ದೇಶಕ ಎಸ್. ಕೆ.ಮಲ್ಲಿಕಾರ್ಜುನ, ಬ್ರಾಹ್ಮಣ ಸಂಘದ ಅಧ್ಯಕ್ಷ ನಿರ್ದೇಶಕ ಶಂಕರ್, ಮುಖಂಡರುಗಳಾದ ಮಂಜುನಾಥ, ಹರೀಶ್, ಭಾರತಿ ಸೇರಿದಂತೆ ಮತ್ತಿತರರು ಇದ್ದರು.

## ಫಾಸ್ಟ್ ನ್ಯೂಸ್

### ರಾಜಕುಮಾರ್ ಸಾಹಿತ್ಯ ಪುರಸ್ಕಾರಕ್ಕೆ ಹೊಸದುರ್ಗದ ಯುವಕವಿ ಸದಾಶಿವ ಸಂಕಲ್ಪ ಆಯ್ಕೆ

» ಹೊಸದುರ್ಗ



ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ( ರಿ) ಇವರ ವತಿಯಿಂದ 2024 ರ ಪುನೀತ್ ರಾಜಕುಮಾರ್ ಸಾಹಿತ್ಯ ಪುರಸ್ಕಾರಕ್ಕೆ ಈ ಬಾರಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ದೇವಿಗೆರೆ ಗ್ರಾಮದ ಯುವ ಸಾಹಿತಿ, ಉಪನ್ಯಾಸಕ ಸಂಕಲ್ಪ ಕಾವ್ಯನಾಮದ ಡಿ.ಓ.ಸದಾಶಿವ ಅವರು ಮತ್ತು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕೆರವಡಿ ಗ್ರಾಮದ ವಿಶೇಷ ಚೇತನದ ಯುವ ಕವಯಿತ್ರಿ, ವಿದ್ಯಾರ್ಥಿನಿ ಮಧುಕಾರಗಿ, ವಿಶೇಷ ಪ್ರಶಸ್ತಿಗೆ ಹಿರಿಯ ಜಾನಪದ ಕಲಾವಿದರಾದ ಕಂಟನಕುಂಟೆ ಅಶ್ವತ್ಥ್ ನಾರಾಯಣ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರಾದ ಡಾ.ಎಸ್.ರಾಮಲಿಂಗೇಶ್ವರ ತಿಳಿಸಿದ್ದಾರೆ. ಮೇ 25 ನೇ ತಾರೀಖು ಶನಿವಾರ ಬೆಳಗ್ಗೆ 10:30 ಗಂಟೆಗೆ ಬೆಂಗಳೂರಿನ ನಯನ ಸಭಾಂಗಣದಲ್ಲಿ ನಗದು, ಶಾಲು, ಹಾರ, ಫಲ, ಫಲಕ, ಪ್ರಮಾಣಪತ್ರ, ನೆನಪಿನ ಕಾಣಿಕೆ ನೀಡಿ ಗಣ್ಯರಾದ ಚಿಂತಕಿ ಡಾ.ಗೀತ ರಾಮಾನುಜಂ, ಸಹಕಾರ ಕ್ಷೇತ್ರದ ಜಂಟಿ ನಿರ್ದೇಶಕರಾದ ಲಕ್ಷ್ಮೀಪತಯ್ಯ, ದತ್ತಿದಾನಿ ಶಶಿಕಾಂತರಾವ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪರೀಕ್ಷೆಯಲ್ಲಿ ಫೇಲ್: ವಿದ್ಯಾರ್ಥಿನಿ ಆತ್ಮಹತ್ಯೆ

» ಹೊಸದುರ್ಗ

ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕೆ ಹೊಸದುರ್ಗ ಪಟ್ಟಣದಲ್ಲಿ ವಿದ್ಯಾರ್ಥಿನಿಯೊಬ್ಬಳು ಮನನೊಂದು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಶನಿವಾರ ನಡೆದಿದೆ. ಪಟ್ಟಣದ ಕೊಬ್ಬರಿ ಪೇಟೆಯ 16 ವರ್ಷದ ಧನುಶ್ರೀ ನೇಣಿಗೆ ಶರಣಾದ ವಿದ್ಯಾರ್ಥಿನಿಯಾಗಿದ್ದು, ಕೊಬ್ಬರಿ ಪೇಟೆಯಲ್ಲಿ ಹೋಟೆಲ್ ಕೆಲಸ ಮಾಡಿಕೊಂಡಿದ್ದ ನಾಗರಾಜ್ ಎಂಬುವವರ ಮಗಳು ಎಂದು ಹೇಳಲಾಗಿದೆ. ಪರೀಕ್ಷೆಯಲ್ಲಿ 4 ವಿಷಯಗಳು ಫೇಲಾಗಿದ್ದವು. ಇದರಿಂದ ಮನನೊಂದಿದ್ದ ಧನುಶ್ರೀ ಕಳೆದ 3 ದಿನಗಳಿಂದ ಮನೆಯಿಂದ ಹೊರ ಬಾರದೆ, ಮನೆಯಲ್ಲಿ ಖಿನ್ನತೆಗೆ ಒಳಗಾಗಿದ್ದಳು. ಪೋಷಕರು ಇನ್ನೊಮ್ಮೆ ಪರೀಕ್ಷೆ ಬರೆಯುವಂತೆ ಧೈರ್ಯ ಹೇಳಿದ್ದರು. ಖಿನ್ನತೆಯಿಂದ ಹೊರಬಾರದ ಧನುಶ್ರೀ ಶನಿವಾರ ಬೆಳಿಗ್ಗೆ ತನ್ನ ಮನೆಯಲ್ಲಿ ಯಾರು ಇಲ್ಲದ ವೇಳೆ ಅಡಿಗೆ ಮನೆಯಲ್ಲಿದ್ದ ತೀರಿಗೆ ನೇಣು ಹಾಕಿ ಕೊಂಡಿದ್ದಾಳೆ ಎಂದು ಮೃತ ವಿದ್ಯಾರ್ಥಿನಿಯ ತಂದೆ ನಾಗರಾಜು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ವಿದ್ಯುತ್ ಶಾಕ್ ಹೊಡೆದು ರೈತ ಸಾವು

» ಚಳ್ಳಕೆರೆ

ತಾಲ್ಲೂಕಿನ ಹೊಟ್ಟೆಪ್ಪನಹಳ್ಳಿ ಗ್ರಾಮದ ರೈತ ಎಂ.ತಿಮ್ಮಣ್ಣ ಮೋಟಾರ್ ಪಂಪ್‌ಗೆ ವೈಯರ್ ರಿಪೇರಿ ಮಾಡುವ ಸಂದರ್ಭದಲ್ಲಿ ಆಕಸ್ಮಿಕವಾಗಿ ವಿದ್ಯುತ್ ಶಾಕ್ ಹೊಡೆದು ಸ್ಥಳದಲ್ಲೇ ಮೃತಪಟ್ಟಿರುತ್ತಾನೆ. ತನ್ನ ಜಮೀನಿಗೆ ಸಂಪರ್ಕ ಪಡೆದಿದ್ದ ವಿದ್ಯುತ್ ವೈರನ್ನು ಸರಿಪಡಿಸುವ ಯತ್ನದಲ್ಲಿದ್ದಾಗ ಈ ಘಟನೆ ನಡೆದಿದೆ. ಸುದ್ದಿ ತಿಳಿದಕೂಡಲೇ ಬೆಸ್ಕಾಂ ಇಲಾಖೆ ಎಇಇ ರಾಜು, ಪೊಲೀಸ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ದಾಖಲಿಸಿದ್ದಾರೆ.

# ಮದುವೆ ಊಟ ಸೇವಿಸಿ ಅಸ್ವಸ್ಥರಾಗಿದ್ದ ಆರೋಗ್ಯ ವಿಚಾರಿಸಿದ ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ


» ಹೊಳಲ್ಕೆರೆ

ಭರಮಸಾಗರ ಹೋಬಳಿಯ ಕಾಲ್ಗೆರೆ ಗ್ರಾಮದಲ್ಲಿ ಮದುವೆಯ ಊಟ ಸೇವಿಸಿ ಅಸ್ವಸ್ಥರಾಗಿ ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ದಾಖಲಾಗಿರುವವರನ್ನು ಹೊಳಲ್ಕೆರೆ ಶಾಸಕ ಡಾ.ಎಂ. ಚಂದ್ರಪ್ಪನವರು ವೀಕ್ಷಿಸಿ ಆರೋಗ್ಯ ವಿಚಾರಿಸಿದರು. ಅಸ್ವಸ್ಥರಾಗಿರುವವರಿಗೆ ತೊಂದರೆಯಾಗದಂತೆ ಚಿಕಿತ್ಸೆ ನೀಡುವಂತೆ ಚಿಗಟೇರಿ ಆಸ್ಪತ್ರೆಯ ವೈದ್ಯರುಗಳಾದ ಶಿವರಾಜ್, ವೇದಮೂರ್ತಿ, ಲೋಹಿತ್ ಇವರುಗಳಿಗೆ ಸೂಚಿಸಿದರು.ಶೈಲೇಶ್, ಶೇಖರಪ್ಪ ಹಾಗೂ ಗ್ರಾಮದ ಮುಖಂಡರುಗಳು ಈ ಸಂದರ್ಭದಲ್ಲಿದ್ದರು.



# ಸಾಲ ತೀರಿಸಲಾಗದೆ ನೇಣು ಹಾಕಿಕೊಂಡು ರೈತ ಆತ್ಮಹತ್ಯೆ

» ಚಳ್ಳಕೆರೆ



ತಾಲ್ಲೂಕಿನ ಬಾಲೇನಹಳ್ಳಿ ಗ್ರಾಮದ ರೈತ ಮೋಹನ್‌ಕುಮಾರ್(43) ಜಮೀನು ಹೊಂದಿದ್ದು, ಅಣ್ಣ ನರಸಿಂಹರಾಘವ ಜೊತೆಗೂಡಿ ಜಮೀನಿನ ಸಾಗುವಳಿ ಮಾಡುತ್ತಿದ್ದರು. ಗ್ರಾಮದ 13/2ರಲ್ಲಿ 4.17 ಎಕರೆ ಜಮೀನಿದ್ದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸುಮಾರು 90 ಸಾವಿರ ಸಾಲ ಪಡೆದು ಜಮೀನಿನಲ್ಲಿ ತೊಗರಿ ಹಾಗೂ ಕಡಲೆ ಬೆಳೆ ಬಿತ್ತನೆ ಮಾಡಿದ್ದ. ಬೆಳೆ ಸಂಪೂರ್ಣ ಕೈಕೊಟ್ಟು ಬ್ಯಾಂಕ್ ಸಾಲವಲ್ಲದೆ, ಖಾಸಗಿಯಾಗಿಯೂ ಸಾಲ ಮಾಡಿದ್ದ. ಸಾಲ ತೀರಿಸಲಾಗದೆ ತನ್ನ ಮನೆಯಲ್ಲೇ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾನೆ. ಮೃತನ ಪತ್ನಿ ಗೀತಾ ಪೊಲೀಸರಿಗೆ ದೂರು ನೀಡಿದ್ದು, ಠಾಣಾಧಿಕಾರಿ ಎಎಸ್ಐ ಶಿವಣ್ಣ ಪ್ರಕರಣ ದಾಖಲಿಸಿ ತನಿಖೆ ಮುಂದುವರೆಸಿದ್ದಾರೆ.

**ಪ್ರಮುಖ ಸುದ್ದಿ**

### ಭಗವಂತನ ಅನುಗ್ರಹ ಪಡೆದಾಗ ಮಾತ್ರ ಬದುಕು ಸಾರ್ಥಕತೆಯತ್ತ : ಶ್ರೀಶಿವಲಿಂಗಾನಂದಸ್ವಾಮಿ

# ಪ್ರತಿಯೊಬ್ಬ ಬದುಕಿನ ನೆಮ್ಮದಿ ಧಾರ್ಮಿಕ ಕಾರ್ಯದಲ್ಲಿ ಅಡಗಿದೆ

» ಚಳ್ಳಕೆರೆ

ಸರ್ವಧರ್ಮಗಳನ್ನು ಸಮಾನತೆ, ಪ್ರೀತಿಯಿಂದ ಕಾಣುವ ಭಾರತ ದೇಶದ ಬಗ್ಗೆ ಎಲ್ಲರಿಗೂ ಹೆಮ್ಮೆ ಇದೆ. ಯಾವುದೇ ರೀತಿಯ ಪುಣ್ಯವನ್ನು ಸಂಪಾದಿಸಲು ನಾವು ಧರ್ಮದ ಹಾದಿಯಲ್ಲೇ ನಡೆಯಬೇಕು. ನಮ್ಮೆಲ್ಲರ ರಕ್ಷಣೆಗೆ ಭಗವಂತನ ಅನುಗ್ರಹ ಸದಾ ಇರಬೇಕಾಗುತ್ತದೆ. ಭಗವಂತನನ್ನು ನಾವು ಕಾಣಲು ಧಾರ್ಮಿಕ ಕಾರ್ಯಗಳು ನಮಗೆ ದಾರಿದೀಪವಾಗುತ್ತವೆ ಎಂದು ಚಿತ್ರದುರ್ಗದ ಕಬೀರಾನಂದ ಆಶ್ರಮದ ಶ್ರೀಶಿವಲಿಂಗಾನಂದಸ್ವಾಮಿಗಳು ತಿಳಿಸಿದರು.

ಅವರು, ಭಾನುವಾರ ತಾಲ್ಲೂಕಿನ ನಗರಂಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನರಹರಿನಗರದ ನರಹರೇಶ್ವರ ದೇವಾಲಯದಲ್ಲಿ ನರಹರಿಸೇವಾ ಪ್ರತಿಷ್ಠಾನ ಕೈಗೊಂಡಿದ್ದ ವಿಗ್ರಹಗಳ ಪ್ರತಿಷ್ಠಾಪನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ನರಹರಿಸದ್ಗುರುಪೀಠದ ಧಾರ್ಮಿಕ ಕಾರ್ಯಕ್ರಮಗಳು ಭಕ್ತರ ಶ್ರೇಯಸ್ಸಿಗಾಗಿಯೇ ಸದಾನಡೆಯುತ್ತಾ ಬಂದಿವೆ. ಕಳೆದ ಹಲವಾರು ದಶಕಗಳಿಂದ ಈ ಪೀಠ ಎಲ್ಲಾ ವರ್ಗದ ಜನರ ಗೌರವಕ್ಕೆ ಪಾತ್ರವಾಗಿದೆ. ರಾಜರಾಮ್





ಸ್ವಾಮೀಜಿಗಳು ಸೇರಿದಂತೆ ಪೀಠದ ಎಲ್ಲಾ ಹಿರಿಯರು ಉತ್ತಮ ಕಾರ್ಯಗಳ ಮೂಲಕ ಸಮಾಜದ ಗೌರವಕ್ಕೆ ಪಾತ್ರರಾಗಿದ್ದಾರೆ. ಇಂದು ಪ್ರತಿಷ್ಠಾಪನೆ ಮಾಡಲ್ಪಟ್ಟ ಬ್ರಹ್ಮಶ್ರೀಲಕ್ಷ್ಮಿನೃಸಿಂಹ ಸದ್ಗುರು, ಬ್ರಹ್ಮಶ್ರೀಸಿಂಹಾದ್ರಿ ಸದ್ಗುರು, ಮಹಾತೃಶ್ರೀನಾಗವೇಣಮ್ಮನವರ ಮಹಾನ್‌ಸೇವೆಯನ್ನು ಸದಾ ಸ್ಮರಿಸುವ ಕಾರ್ಯ ಪ್ರತಿಷ್ಠಾಪನೆ ಮೂಲಕ ಜಾಗೃತವಾಗಿದೆ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ನರಹರಿಸದ್ಗುರುಪೀಠಾಧ್ಯಕ್ಷ ರಾಜರಾಮ್‌ಸ್ವಾಮಿ, ಮೂರು ದಿವ್ಯಮೂರ್ತಿಗಳ ಪ್ರತಿಷ್ಠಾಪನಾ ಕಾರ್ಯ ಇಂದು ಪೂಜ್ಯ ಶಿವಾಲಿಂಗಾನಂದಸ್ವಾಮಿಗಳ ಮಾರ್ಗದರ್ಶನದಲ್ಲಿ ನಡೆದಿದೆ. ಧಾರ್ಮಿಕ ಕ್ಷೇತ್ರದಲ್ಲಿ ಈ ಮೂರು ಮಹಾನೀಯರು ಸಲ್ಲಿಸಿದ ನಿಸ್ವಾರ್ಥಸೇವೆ ಶ್ಲಾಘನೀಯ. ಧಾರ್ಮಿಕ ಕಾರ್ಯಕ್ರಮಗಳ ನಿರಂತರ ಆಚರಣೆಯಿಂದ ನಮ್ಮೆಲ್ಲರ ಬದುಕು ಪರಿಶುದ್ದತೆಯತ್ತ ಸಾಗುತ್ತದೆ. ನಮ್ಮಲ್ಲಿರುವ ಅಜ್ಞಾನವನ್ನು ಹೋಗಲಾಡಿಸಲು ಜ್ಞಾನವನ್ನು ಪಡೆಯಬೇಕಾದರೆ ಇಂದು ನಡೆದ ಇಂತಹ ಕಾರ್ಯಕ್ರಮಗಳು ನಮಗೆ ಪ್ರೇರಕ ಶಕ್ತಿಯಾಗಲಿವೆ ಎಂದರು. ಕೇವಲ ಕರ್ನಾಟಕವಷ್ಟೇಯಲ್ಲ, ಆಂಧ್ರಪ್ರದೇಶದಿಂದಲೂ ನೂರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಈ ಕಾರ್ಯವನ್ನು ಯಶಸ್ವಿಗೊಳಿಸಿದ್ದಾರೆ. ನರಹರಿ ಸದ್ಗುರುಪೀಠ ಎಲ್ಲಾ ಭಕ್ತರ ಸಹಕಾರಕ್ಕೆ ಅಭಿನಂದನೆ ಸಲ್ಲಿಸುತ್ತದೆ ಎಂದರು. ನರಹರಿ ಸದ್ಗುರುಆಶ್ರಮದಲ್ಲಿ ಹಮ್ಮಿಕೊಂಡಿದ್ದ ವಿಗ್ರಹಪ್ರತಿಷ್ಠಾನಾ ಕಾರ್ಯದಲ್ಲಿ ಕ್ಷೇತ್ರದ ಶಾಸಕ ಟಿ.ರಘು ಮೂರ್ತಿ ಪಾಲ್ಗೊಂಡು ಸ್ವಾಮೀಜಿಯವರ ಆಶೀರ್ವಾದ ಪಡೆದರು. ಈ ಪೀಠದಲ್ಲಿ ನಿರಂತರವಾಗಿ ನಡೆಯುವ ಎಲ್ಲಾ ಕಾರ್ಯ ಕ್ರಮಗಳಿಗೆ ಸಹಕಾರ ನೀಡುವುದು ಎಲ್ಲರ ಕರ್ತವ್ಯ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಂತರಾಮ್‌ಸ್ವಾಮಿ ವಹಿಸಿದ್ದರು. ಟ್ರಸ್ಟ್ ಜಂಟಿ ಕಾರ್ಯದರ್ಶಿ ಬಿ.ಸಿ.ಸಂಜೀವಮೂರ್ತಿ, ಎನ್.ಪದ್ಮನಾಭ್, ಭಕ್ತವತ್ಸಲ, ಬಿ.ಸಿ.ಸತೀಶ್, ಜಿ.ವಿ.ಸುಬ್ಬರಾಜ್, ರಘುರಾಮ್, ಏಕಾಂತರಾಮ್, ದೇವರಾಜರೆಡ್ಡಿ, ನಾಗರಾಜರೆಡ್ಡಿ, ರಾಮರೆಡ್ಡಿ, ದಿನೇಶ್‌ರೆಡ್ಡಿ, ಬಿ.ವಿ.ಚಿದಾನಂದ, ರವಿಪ್ರಸಾದ್, ಮಾರುತಿಪ್ರಸಾದ್, ರಾಮಚಂದ್ರಪ್ಪ ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಪ್ರವೇಶ ಪಡೆಯಲು ಜೂನ್ 5 ಕಡೆಯ ದಿನ; ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರಾಗಲು ಸದಾವಕಾಶ

» **ಹೊಸದುರ್ಗ**

2024-25 ನೇ ಸಾಲಿನ ಡಿಪಿಎಸ್ಇ (ಡಿಪ್ಲಮೋ ಇನ್ ಪ್ರೀ ಪ್ರೈಮರಿ ಎಜುಕೇಷನ್) ಕೋರ್ಸ್ ಪ್ರವೇಶಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅರ್ಜಿಗಳನ್ನು ಆಹ್ವಾನಿಸಿದ್ದು ಹೊಸದುರ್ಗ ಪಟ್ಟಣದಲ್ಲಿರುವ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಅರ್ಜಿ ವಿತರಣೆ ಮತ್ತು ಸ್ವೀಕೃತಿ ಪ್ರಕ್ರಿಯೇ ಈಗಾಗಲೆ ಅರಂಭಗೊಂಡಿದ್ದು ಜೂನ್ 5 ರಂದು ಕೊನೆಯ ದಿನವಾಗಿರುತ್ತದೆ ಎಂದು ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ಎಂ.ಎಸ್.ನಟರಾಜ್ ತಿಳಿಸಿದ್ದಾರೆ.ಈ ಕೋರ್ಸ್ ಎರಡು ವರ್ಷಗಳದ್ದಾಗಿದ್ದು ಕೋರ್ಸ್ ಮುಗಿದ ನಂತರ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರಾಗಲು ಅರ್ಹತೆ ಹೊಂದಲಾಗುತ್ತದೆ,ರಾಜ್ಯದಲ್ಲಿ ಕೇವಲ ಎರಡು ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಮಾತರ ಸದರಿ ಕೋರ್ಸ್ ಚಾಲನೆಯಲ್ಲಿದ್ದು ಈ ಕೋರ್ಸ್‌ಗೆ ಪ್ರವೇಶ ಪಡೆಯಲು ದ್ವಿತೀಯ ಪಿ.ಯು.ಸಿ ಪರೀಕ್ಷೆ ಉತ್ತೀರ್ಣವಾಗಿರುವುದು ಕಡ್ಡಾಯವಾಗಿರುತ್ತದೆ, ಹೆಚ್ಚಿನ ಮಾಹಿತಿಗೆ ಶಾಲಾ ಅವಧಿಯ ಸಮಯದಲ್ಲಿ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ ಹೊಸದುರ್ಗ ಇಲ್ಲಿ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದು ಹೆಚ್ಚಿನ ಮಾಹಿತಿಗೆ ಮೋ:99803522-980245650 ಸಂಪರ್ಕಿಸಬಹುದು.

### ಬಸವಣ್ಣನವರ ಪೂಜೆಗಿಂತ ಅವರ ಆಚಾರ ವಿಚಾರಗಳನ್ನು ರೂಢಿಸಿಕೊಳ್ಳಬೇಕು




» **ಹೊಸದುರ್ಗ**

ಬಸವಣ್ಣನವರಿಗೆ ಹೆಚ್ಚು ಅಲಂಕಾರ ಮಾಡುವುದರಿಂದ ಅವರಿಗೆ ತೃಪ್ತಿಯಾಗುವುದಿಲ್ಲ. ಬದಲಿಗೆ ಅವರ ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡು. ನುಡಿದಂತೆ ನಡೆಯಬೇಕು ಆಗ ಬದುಕಿಗೊಂದು ಅರ್ಥ ಬರುತ್ತದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್ ಬಿಲ್ಲಪ್ಪ ಅಭಿಪ್ರಾಯಪಟ್ಟರು. ತಾಲ್ಲೂಕು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಪಟ್ಟಣದ ಒಪ್ಪತ್ತಿನಸ್ವಾಮಿ ವಿರಕ್ತ ಮಠದಲ್ಲಿ ಆಯೋಜಿಸಿದ್ದ 'ವಿಶ್ವಗುರು ಬಸವೇಶ್ವರ ಜಯಂತಿ ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಸಮಾಜದಲ್ಲಿ ಸಮಾನತೆಗಾಗಿ ಸಂಘರ್ಷಗಳು ನಡೆಯುತ್ತಿವೆ. ಸಮಾಜದ ತುಂಬೆಲ್ಲಾ ಜಾತಿ, ಧರ್ಮ, ಮೇಲು, ಕೀಳು ಭಾವನೆಯಿಂದ ಸಮಾನತೆ ದೂರಾಗಿದೆ. ಮನುಷ್ಯರನ್ನು ಮನುಷ್ಯರ ರೀತಿ ನೋಡುವ ಕಾರ್ಯವಾಗುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ ಬಸವಣ್ಣನವರ ಮಾನವತಾವಾದಿ ವಿಚಾರಗಳನ್ನು ತಲುಪಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಹುಟ್ಟು ಸಾವಿನಲ್ಲಿ ಸಮಾನವಾಗಿರುವ ಮಾನವರ ಬದುಕಿನಲ್ಲಿ ಸಮಾನತೆಯಿಲ್ಲ ಎಂಬ ವಿಷಾದವನ್ನ ವ್ಯಕ್ತಪಡಿಸಿದರು.ವೀರ ಶೈವ ಸಮಾಜ ಮುಖಂಡ ಕೆ.ಎಸ್.ಕಲ್ಮಠ್ ಮಾತನಾಡಿ ಬಸವಣ್ಣನವರನ್ನು ಒಂದು ಜಾತಿಗೆ ಸೀಮಿತಗೊಳಿಸಬೇಡಿ. ಬಸವಾದಿ ಶಿವಶರಣರ ತತ್ವಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬೇರೆಯವರ ಸಂಪತ್ತನ್ನು ಮಣ್ಣಿನ ಹೆಂಟೆಯಂತೆ ನೋಡಬೇಕು. ನಡೆ, ನುಡಿ ಒಂದಾಗಿ ಬಾಳಬೇಕು. ಎಂದು ಕರೆ ನೀಡಿದರು.ವೀರಶೈವ ಲಿಂಗಾಯತ ಸಮಾಜದ ತಾಲ್ಲೂಕು ಅಧ್ಯಕ್ಷ ಬಿ.ಪಿ. ಓಂಕಾರಪ್ಪ, ಪುರಸಭೆ ಸದಸ್ಯ ಶ್ರೀನಿವಾಸ, ವೀರಶೈವ ಲಿಂಗಾಯತ ಸಮಾಜದ ಮುಖಂಡರುಗಳಾದ ಬಿ.ಇ. ಆಶೋಕ್, ಹನುಮಂತಪ್ಪ, ಕೋಡಿಹಳ್ಳಿ ತಮ್ಮಣ್ಣ , ಹೆಬ್ಬಳ್ಳಿ ಮಲ್ಲಿಕಾರ್ಜುನ, ಎಂ.ಬಿ ತಿಪ್ಪೇಸ್ವಾಮಿ, ಚೆನ್ನಬಸಯ್ಯ ಮಠ, ಕಾಂತರಾಜ್, ಜಿ. ಗುರುಮೂರ್ತಿ ಎಸ್.ನಿಜಲಿಂಗಪ್ಪ ವಿದ್ಯಾ ಸಂಸ್ಥೆಯ ಆಡಳಿ ಮಂಡಳಿ, ಶಿಕ್ಷಕ ವೃಂದ ಭೋಧಕ ಭೋದಕೇತರ ವರ್ಗ ಸೇರಿದಂತೆ ವೀರಶೈವ ಲಿಂಗಾಯತ ಸಮಾಜದವರು ಉಪಸ್ಥಿತರಿದ್ದರು.

### ಮೇ.14ರಂದು ಭಗೀರಥ ಜಯಂತಿ

» **ಚಿತ್ರದುರ್ಗ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ವತಿಯಿಂದ ಇದೇ ಮೇ.14ರಂದು ಬೆಳಿಗ್ಗೆ 11 ಗಂಟೆಗೆ ಚಿತ್ರದುರ್ಗ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಗೀರಥ ಜಯಂತಿ ಆಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಿರುವ ಹಿನ್ನಲೆಯಲ್ಲಿ ಭಗೀರಥ ಜಯಂತಿಯನ್ನು ಸರಳವಾಗಿ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ಪಕ್ಷಿಗಳಿಗೆ ನೀರುಣಿಸುವ ಕಾಯಕಕ್ಕೆ ತನ್ನನ್ನು ತಾನೇ ತೊಡಗಿಸಿಕೊಂಡಿರುವ ಲಿಪಿಕಾ

# ನಿತ್ಯ ನೂರಾರು ಪಕ್ಷಿಗಳಿಗೆ ನೀರುಣಿಸುವ ಕಾಯಕ

» **ನಾಗತಿಹಳ್ಳಿಮಂಜುನಾಥ್**


ಹೊಸದುರ್ಗ: ಕಲೆ ಎಂಬುದು ಎಲ್ಲರಲ್ಲೂ ಇರುತ್ತದೆ ಆದರೆ ಅದರಲ್ಲಿ ಕೆಲವರನ್ನ ಮಾತ್ರ ಆಯ್ಕೆ ಮಾಡಿಕೊಳ್ಳುತ್ತದೆ ಹಾಗೆಯೇ ಪ್ರಾಣಿ ಪಕ್ಷಿಗಳ ಬಗ್ಗೆ, ಪರಿಸರ ಕಾಳಜಿಯ ಬಗ್ಗೆ ಎಲ್ಲರಿಗೂ ಅಸಕ್ತಿ ಸ್ವಲ್ಪ ಮಟ್ಟಿಗೆ ಇರುತ್ತದೆ ಆದರೆ ಕೆಲವರು ಮಾತ್ರ ತಮ್ಮ ಇಚ್ಛಾ ಶಕ್ತಿಯ ಆಸಕ್ತಿಯನ್ನ ತೋರವುದು ಅಪರೂಪ, ಅದರಲ್ಲೂ ಎಳೆಯ ಮಯಸ್ಸಿನ ಮಗ್ಧ ಮನಸ್ಸುಗಳು ಪರಿಸರ ಕಾಳಜಿಯ ಬಗ್ಗೆ ಪ್ರಾಣಿ ಪಕ್ಷಿಗಳ ಬಗ್ಗೆ ಕಾಳಜಿ ವಹಿಸುತ್ತಾರೆ ಎಂದರೆ ಅದು ಮೂಗಿನ ಮೇಲೆ ಬೆರಳಿಟ್ಟುಕೊಂಡು ನೋಡಲೇ ಬೇಕು ಅಂತಹ ಅಪರೂಪದ ಬಾಲಕಿಯೋರ್ವಳನ್ನು ಹೊಸದುರ್ಗ ತಾಲೂಕಿನ ಗಾಳಿರಂಗಯ್ಯನಹಟ್ಟಿಯ ಗ್ರಾಮದಲ್ಲಿ ಕಾಣಬಹುದಾಗಿದೆ.


ಬಿರು ಬೇಸಿಗೆಯ ಜೊತೆಗೆ ರಣಬಿಸಿಲು ಒಟ್ಟಾಗಿರುವ ಸದ್ಯದ ಪರಿಸ್ಥಿತಿಯಲ್ಲಿ ಎಲ್ಲೆಲ್ಲೂ ಜನರಿಗೆ ಕುಡಿಯುವ ನೀರಿನ ಸಮಸ್ಯೆ ತಲೆದೂರಿರುವುದು ಸಾಮಾನ್ಯ ಸಂಗತಿಯಾಗಿದೆ. ಜನರದ್ದು ಈ ಕಥೆಯಾದರೆ ಪ್ರಾಣಿ ಪಕ್ಷಿಗಳ ಕಥೆಯಂತೂ ಹೇಳತೀರದಾಗಿದೆ ಎಲ್ಲೆಲ್ಲಿಯೂ ಹನಿ ನೀರು ಸಿಗದೆ ಬಿಸಿಲಿನ ತಾಪಕ್ಕೆ ಒದ್ದಾಡಿ ನಿತ್ಯ ಎಷ್ಟೋ ಪಕ್ಷಿಗಳು ಜೀವ ಕಳೆದುಕೊಳ್ಳುತ್ತಿವೆ. ಇಂತಹ ಪಕ್ಷಿಗಳ ಒದ್ದಾಟವನ್ನು ಮನಗಂಡಿರುವ ಬಾಲಕಿಯೊಬ್ಬಳು ನಿತ್ಯ ನೂರಾರು ಪಕ್ಷಿಗಳಿಗೆ ನೀರುಣಿಸುವ ಕಾಯಕಕ್ಕೆ ತನ್ನನ್ನು ತಾನೇ ತೊಡಗಿಸಿಕೊಂಡಿದ್ದಾಳೆ.

ಹೊಸದುರ್ಗ ತಾಲ್ಲೂಕಿನ ದೇವಿಗೆರೆ ಪಂಚಾಯ್ತಿ ವ್ಯಾಪ್ತಿಯ ಗಾಳಿರಂಗಯ್ಯನಹಟ್ಟಿಯ 5 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹತ್ತು ವರ್ಷದ ಕುಮಾರಿ ಎಂ ಎಸ್ ಲಿಪಿಕಾ ಬೆಳಕು ಎನ್ನುವ ಬಾಲಕಿಯೇ ಪೋಷಕರ ಸಹಕಾರದೊಂದಿಗೆ ನಿತ್ಯ ಪಕ್ಷಿಗಳಿಗೆ ನೀರುಣಿಸುವ ಕಾಯಕ ಮಾಡುತ್ತಿರುವುದು. ಜನರು ಬಳಸಿ ಬಿಸಾಡಿರುವ ನೀರಿನ ಪ್ಲಾಸ್ಟಿಕ್ ಬಾಟಲಿಗಳನ್ನು ಸಂಗ್ರಹಿಸಿ ಪೋಷಕರ ಸಹಕಾರದಿಂದ ಅವುಗಳನ್ನು ಕತ್ತರಿಸಿ ನೀರಿನ ಬಟ್ಟಲುಗಳ ರೀತಿಯಲ್ಲಿ ಮಾರ್ಪಡಿಸಿ ತಯಾರಿಸಿದ ಸುಮಾರು 150 ರಿಂದ 200 ನೀರಿನ ಬಟ್ಟಲುಗಳನ್ನ ಊರಿನ ಕೆರೆಯಂಗಳದಲ್ಲಿನ ಗಿಡ ಮರಗಳ ಕೊಂಬೆಗಳಿಗೆ ಕಟ್ಟಿ ಪ್ರತಿದಿನ ಬೆಳಿಗ್ಗೆ ಮನೆಯಿಂದ 8 ರಿಂದ 10 ಲೀಟರ್ ನೀರು ತೆಗೆದುಕೊಂಡು ಹೋಗಿ ಬಟ್ಟಲುಗಳನ್ನು ತುಂಬಿಸುವ ಮೂಲಕ ನಿತ್ಯ ನೂರಾರು ಪಕ್ಷಿಗಳಿಗೆ ನೀರುಣಿಸುವ ಕಾಯಕವನ್ನು ರೂಡಿಸಿಕೊಂಡಿದ್ದಾಳೆ.

ಮಗಳ ಈ ಕಾರ್ಯಕ್ಕೆ ತಂದೆ ಬೆಳಕು ಪ್ರಿಯ ಮುರಳಿ ಹಾಗೂ ತಾಯಿ ಶ್ವೇತಾ ಬೆಳಕು ಇವರು ಕೂಡ ಪ್ರೋತ್ಸಾಹದ ಜೊತೆಗೆ ಸಹಾಯ ಸಹಕಾರ ನೀಡುತ್ತಿದ್ದಾರೆ.










ದಯವಿಟ್ಟು ನಿಮ್ಮ ನಿಮ್ಮ ಮನೆಯಂಗಳ, ಟೆರೇಸ್ ಸೇರಿದಂತೆ ಅಕ್ಕಪಕ್ಕದ ಗಿಡ ಮರಗಳಲ್ಲಿ ನಿಮಗೆ ಸಾಧ್ಯವಾದ ಮಟ್ಟಿಗೆ ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಿ-ಪಕ್ಷಿ ಸಂಕುಲ ಉಳಿಸಿ

» **ಕುಮಾರಿ ಎಂ ಎಸ್ ಲಿಪಿಕಾ ಬೆಳಕು**

## ಧಾರ್ಮಿಕ ಕಾರ್ಯಕ್ರಮಗಳಲ್ಲಿದೆ ಬದುಕಿನ ಸಾರ್ಥಕತೆ





» **ಚಳ್ಳಕೆರೆ**

ತಾಲ್ಲೂಕಿನ ನಗರಂಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನರಹರಿ ನಗರದ ನರಹರೇಶ್ವರ ದೇವಸ್ಥಾನದ ಪ್ರಾಂಗಣದಲ್ಲಿ ಶ್ರೀನರಹರಿ ಸೇವಾ ಪ್ರತಿಷ್ಠಾನದ ವತಿಯಿಂದ ಬ್ರಹ್ಮಶ್ರೀಲಕ್ಷ್ಮಿನೃಸಿಂಹ ಸದ್ಗುರು, ಬ್ರಹ್ಮಶ್ರೀಸಿಂಹಾದ್ರಿ ಸದ್ಗುರು, ಮಾತೃಶ್ರೀನಾಗವೇಣಮ್ಮನವರ ದಿವ್ಯಮಂಗಳ ವಿಗ್ರಹ ಪ್ರತಿಷ್ಠಾಪನೆ ಕಾರ್ಯನಿಮಿತ್ತ ಶನಿವಾರ ನಗರದ ಶ್ರೀವೀರಭದ್ರಸ್ವಾಮಿ ದೇವಸ್ಥಾನದಿಂದ ಪ್ರತಿಷ್ಠಾಪಿಸಲಿರುವ ವಿಗ್ರಹಗಳ ಮೆರವಣಿಗೆ ನಡೆಯಿತು.

ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ವೈ.ಶಾಂತರಾಮ್‌ಸ್ವಾಮಿ, ಇದು ಕಳೆದ ಹಲವಾರು ವರ್ಷಗಳ ಕನಸು ಇಂದು ನನಸಾಗುತ್ತಿದೆ. ನರಹರಿಸೇವಾ ಪ್ರತಿಷ್ಠಾನ ಸಾವಿರಾರು ಭಕ್ತರ ಕೋರಿಕೆಯನ್ನು ಈಡೇರಿಸುವಲ್ಲಿ ಇಂದು ದಿಟ್ಟಹೆಜ್ಜೆ ಇಟ್ಟಿದೆ. ನರಹರಿ ಸದ್ಗುರುಪೀಠದ ಸಂಸ್ಥಾಪಕರು ಈ ಭಾಗದ ಲಕ್ಷಾಂತರ ಭಕ್ತರ ಆರಾಧ್ಯವೈದವಾದ ಮೂರು ಮಹಾನೀಯರ ದಿವ್ಯ ಮೂರ್ತಿಗಳ ಪ್ರತಿಷ್ಠಾಪನಾ ಪುಣ್ಯಕಾರ್ಯದಲ್ಲಿ ತಾವೆಲ್ಲರೂ ಭಾಗವಹಿಸಲು ಆಗಮಿಸಿದ್ದೀರಿ, ಟ್ರಸ್ಟ್‌ಪರವಾಗಿ ಎಲ್ಲಾ ಭಕ್ತರನ್ನು ಅಭಿನಂದಿಸುವುದಾಗಿ ತಿಳಿಸಿದರು.

ನರಹರಿ ಸದ್ಗುರು ಸಂಪ್ರದಾಯಕ ಪೀಠಾಧ್ಯಕ್ಷ ವೈ.ರಾಜರಾಮ್‌ಸ್ವಾಮಿ, ಟ್ರಸ್ಟ್ ಜಂಟಿ ಕಾರ್ಯದರ್ಶಿ ಬಿ.ಸಿ.ಸಂಜೀವಮೂರ್ತಿ, ಎನ್.ಪದ್ಮನಾಭ್, ಭಕ್ತವತ್ಸಲ, ಬಿ.ಸಿ.ಸತೀಶ್, ಜಿ.ವಿ.ಸುಬ್ಬರಾಜ್, ರಘುರಾಮ್, ಏಕಾಂತರಾಮ್, ದೇವರಾಜರೆಡ್ಡಿ, ನಾಗರಾಜರೆಡ್ಡಿ, ರಾಮರೆಡ್ಡಿ, ದಿನೇಶ್‌ರೆಡ್ಡಿ, ಬಿ.ವಿ.ಚಿದಾನಂದ, ರವಿಪ್ರಸಾದ್, ಮಾರುತಿಪ್ರಸಾದ್, ರಾಮಚಂದ್ರಪ್ಪ ಭಾಗವಹಿಸಿದ್ದರು.

**ಹೊಸದುರ್ಗ ಪಟ್ಟಣದ ಪುರಸಭಯಲ್ಲಿ ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಈ ಸಂಧರ್ಬದಲ್ಲಿ ಪುರಸಭಾ ಮುಖ್ಯಾಧಿಕಾರಿ ತಿಮ್ಮರಾಜು ಜಿ.ವಿ. ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು.**



## ರಾಜಕಾಲುವೆ ಸ್ವಚ್ಚತಾ ಕಾರ್ಯ ಆರಂಭ



» **ಚಳ್ಳಕೆರೆ**

ಕಳೆದ ಒಂದು ವಾರದಿಂದ ಚಳ್ಳಕೆರೆ ನಗರವೂ ಸೇರಿದಂತೆ ತಾಲ್ಲೂಕಿನಾದ್ಯಂತ ಮಳೆ ಅಲ್ಲಲ್ಲಿ ಆರಂಭವಾಗಿದ್ದು, ಈ ವರ್ಷ ಹೆಚ್ಚಿನ ಪ್ರಮಾಣ ವರ್ಷಧಾರೆಯಾಗುವ ಸಂಭವಿದ್ದು, ನಗರದಲ್ಲಿ ಹಾದುಹೋಗಿರುವ ರಾಜಕಾಲುವೆಯನ್ನು ಸ್ವಚ್ಚಗೊಳಿಸುವ ಕಾರ್ಯ ನಡೆಸಲಾಗುತ್ತಿದೆ ಎಂದು ಪೌರಾಯುಕ್ತ ಜೀವನ್‌ಕಟ್ಟಿಮನಿ ತಿಳಿಸಿದ್ದಾರೆ. ಕಳೆದ ಕೆಲವು ವರ್ಷಗಳ ಹಿಂದೆ ಮಳೆ ಹೆಚ್ಚಾಗಿ ರಾಜಕಾಲುವೆಯ ನೀರು ರಹೀಂನಗರ, ಕಾಟಪ್ಪನಹಟ್ಟಿಯ ಕೆಲವು ಮನೆಗಳಿಗೆ ಏಕಾಏಕಿ ನುಗ್ಗಿ ಅವಾಂತರ ಸೃಷ್ಠಿಸಿ ಲಕ್ಷಾಂತರ ರೂ ಮೌಲ್ಯದ ಆಹಾರ ಪದಾರ್ಥ, ಇತರೆ ವಸ್ತುಗಳು ಸಹ ನೀರಿನಲ್ಲಿ ಹರಿದುಹೋಗಿದ್ದವು. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನಗರಸಭೆ ಆಡಳಿತ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಂತೆ ರಾಜಕಾಲುವೆ ಸ್ವಚ್ಚಗೊಳಿಸುವ ಕಾರ್ಯವನ್ನು ಪ್ರಾರಂಭಿಸಿದೆ. ರಹೀಂನಗರದಿಂದ ಈ ಕೆಲಸ ಆರಂಭವಾಗಿ ಬಳ್ಳಾರಿ ರಸ್ತೆ, ಕಾಟಪ್ಪನಹಟ್ಟಿ, ಪಾವಗಡ ರಸ್ತೆಯ ತನಕ ರಾಜಕಾಲುವೆಯನ್ನು ಸ್ವಚ್ಚಗೊಳಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಸ್ವಚ್ಚಗೊಳಿಸುವ ಕಾರ್ಯದಲ್ಲಿ ನೈರ್ಮಲ್ಯ ಇಂಜಿನಿಯರ್ ನರೇಂದ್ರಬಾಬು, ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ವಿನಯ್, ಸಹಾಯಕ ಇಂಜಿನಿಯರ್ ಲೋಕೇಶ್, ಹಿರಿಯ ಆರೋಗ್ಯ ನಿರೀಕ್ಷಕ ಸುನೀಲ್‌ಕುಮಾರ್, ರುದ್ರಮುನಿ, ಗಣೇಶ್, ಗೀತಾಕುಮಾರಿ ಮುಂತಾದವರು ಉಪಸ್ಥಿತರಿದ್ದರು.

## ಪ್ರಮುಖ ಸುದ್ದಿ

# ಸನಾತನ ಹಿಂದೂ ಧರ್ಮದ ಸಂರಕ್ಷಕ ಶ್ರೀಶಂಕರಚಾರ್ಯರು

» **ಚಳ್ಳಕೆರೆ**

ಭಗವಾನ್ ಶಂಕರಚಾರ್ಯರು ಕೇವಲ 32 ವರ್ಷಗಳ ಕಾಲ ಜೀವಿಸಿ ದರೂ ಸಹ ಹಿಂದೂಧರ್ಮದ ಉಳಿವಿಗಾಗಿ ಹೋರಾಟನಡೆಸಿದರು.ಶಂಕರಚಾರ್ಯರು ಇಲ್ಲದ ಹಿಂದೂಧರ್ಮವನ್ನು ಕಲ್ಪನೆ ಮಾಡಿಕೊಳ್ಳುವುದು ಕಷ್ಟ. ಅವರ ಸೇವೆ ಅಪಾರವಾದದ್ದು ಎಂದು ನಿವೃತ್ತ ಪ್ರಾಂಶುಪಾಲ, ಧಾರ್ಮಿಕ ಪ್ರವಚನಕಾರ ಅನಂತಕೃಷ್ಣ ಜೋಯಿಸ್ ತಿಳಿಸಿದರು.

ನಗರದರಾಮಮಂದಿರದಲ್ಲಿಭಾನುವಾರ ತಾಲ್ಲೂಕು ಬ್ರಾಹ್ಮಣ ಸಂಘ ಹಾಗೂ ಸದ್ಭಕ್ತರು ಹಮ್ಮಿಕೊಂಡಿದ್ದ ಶಂಕರಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಿದರು.

ಪ್ರತಿಯೊಬ್ಬ ವ್ಯಕ್ತಿಯ ಬದುಕು ಸಾರ್ಥಕತೆಯ ಶಿಖರವನ್ನೇರಬೇಕು. ಧಾರ್ಮಿಕ ಜಾಗೃತಿ ಮೂಡಿದಾಗ ಮಾತ್ರ ವ್ಯಕ್ತಿ ಸನ್ಮಾರ್ಗದಲ್ಲಿ ನಡೆಯುತ್ತಾನೆ. ಸನ್ಮಾರ್ಗದಲ್ಲಿ ಹೆಜ್ಜೆ ಇಟ್ಟ ವ್ಯಕ್ತಿ ಜ್ಞಾನಿಯಾಗಿ ಸಮಾಜದ ಪರಿವರ್ತನೆಗಾಗಿ ಶ್ರಮಿಸುವನ್ನು. ಇಂತಹ ಎಲ್ಲಾ ಸದ್ಗುಣಗಳು ಶಂಕರಚಾರ್ಯರ ವಿಚಾರಧಾರೆಯಿಂದ ನಾವು ಅರಿಯಬಹುದಾಗಿದೆ. ವಿಶ್ವದಲ್ಲಿ ಮಾನವ ಕುಲ ಇರುವತನಕ ಶಂಕರಚಾರ್ಯರ ತತ್ವಾದರ್ಶಗಳು ನಮಗೆ ಮಾರ್ಗದರ್ಶನ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಡಾ.ಅನಂತರಾಮ್‌ಗೌತಮ್ ಮಾತನಾಡಿ, ಪೂಜ್ಯ ಗಾಯಿತ್ರಿ ಮಾತೆಯನ್ನು ನಿತ್ಯ ಸ್ಮರಿಸಬೇಕಿದೆ. ಗಾಯಿತ್ರಿ ಮಾತೆಯಲ್ಲಿ ಸರ್ವಶಕ್ತಿ ಇದೆ ಬದುಕಿನ ಪರಿಪೂರ್ಣತೆ ಇದರಲ್ಲಿ ಅಡಗಿದೆ ಎಂದರು. ಶಂಕರಚಾರ್ಯರೂ ಸಹ ಬಾಲಕನಾಗಿದ್ದಾಗಲೇ ಸನ್ಯತ್ವವನ್ನು ಸ್ವೀಕರಿಸಿದರು. ಆಧ್ಯಾತ್ಮಿಕ ವಿಚಾರಗಳನ್ನು ರೂಢಿಸಿಕೊಂಡವರು. ಶಂಕರಚಾರ್ಯರ ತತ್ವಾದರ್ಶಗಳು ನಮಗೆ ದಾರಿದೀಪ ಎಂದು ತಿಳಿಸಿದರು.

ಉಪಾಧ್ಯಕ್ಷ ಎಂ.ನಾಗರಾಜರಾವ್, ಕಾರ್ಯದರ್ಶಿ ಎಂ.ಸತ್ಯನಾರಾಯಣ ರಾವ್, ಖಜಾಂಚಿ ಜಿ.ಕೃಷ್ಣಮೂರ್ತಿ, ನಿರ್ದೇಶಕರಾದ ಗಂಗಾಧರಭಟ್, ಸಿ.ಎಸ್.ಗೋಪಿನಾಥ, ಶಾಂತಮ್ಮ, ಶೈಲಜಾ, ಮಹಿಳಾ ಘಟಕದ ಅಧ್ಯಕ್ಷೆ ಸೀತಾಲಕ್ಷ್ಮಿವಾದಿರಾಜ್, ಲಕ್ಷ್ಮಿಶ್ರೀವತ್ಸ, ಮುಂತಾದವರು ಪಾಲ್ಗೊಂಡಿದ್ದರು. ಕಾರ್ಯಕ್ರಮಕ್ಕೂಮುನ್ನಶಂಕರಚಾರ್ಯರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು.





ಫಾಸ್ಟ್ ನ್ಯೂಸ್

## ಬಸವ ಜಯಂತಿ



» **ಹೊಸದುರ್ಗ**

ಪ್ರಪಂಚದ ಮಾನವರಲ್ಲಾ ಒಂದೇ ಎಂದು ಸಾರಿದ ಬಸವಣ್ಣನವರು ನಡೆ-ನುಡಿ ಸಮಾನತೆಯನ್ನ ಸಾರಿದ 12 ನ ಶತಮಾನದ ಮಹಾ ಕಾಯಕ ಯೋಗಿ ಬಸವಣ್ಣ. ಮಾನವ ಕುಲಕ್ಕೆ ಲೇಸನ್ನ ಬಯಸಿ ಕಾಯಕವೇ ಕೈಲಾಸ ಎಂಬ ನುಡಿಯನ್ನ ನಾಡಿಗೆ ಸಾರಿದಂತವರು ಹಾಗೂ ನುಡಿದಂತೆ ನಡೆದವರು ಬಸವಣ್ಣನವರು ಎಂದು ಸ್ವಾಮಿ ವಿವೇಕಾನಂದ ಬಳಗದ ಮುಖ್ಯಸ್ಥರಾಗಿ ಕುಮಾರಸ್ವಾಮಿ ತಿಳಿಸಿದರು. ತಾಲೂಕಿನ ಯಾಲಕ್ಕಪ್ಪನಹಟ್ಟಿಯಲ್ಲಿ ಸ್ವಾಮಿ ವಿವೇಕಾನಂದ ಬಳಗದವರು ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.ಬಸವಣ್ಣನವರ ಆದರ್ಶಗಳು ನಮಗೆ ಎಂದಿಗೂ ಸಹಾ ಪ್ರಸ್ತುತ ಅವರ ಆರ್ಶಗಳನ್ನು ನಾವುಗಳು ಮೈಗೂಡಿಸಿಕೊಳ್ಳಬೇಕಿದೆ ಬಸವಣ್ಣನವರು ಹಾಕಿ ಕೊಟ್ಟ ದಾರಿಯಲ್ಲಿ ನಾವುಗಳು ನಡೆಯಬೇಕಿದೆ ಎಂದರು.

# ಮಕ್ಕಳ ಪೋಷಿಸುವ ಶಿಕ್ಷಕಿ ತಾಯಿಗಿಂತ ದೊಡ್ಡವಳು

» **ಚಿತ್ರದುರ್ಗ**

ಭಾರತೀಯ ಯೋಗ ಶಿಕ್ಷಣ ಸಂಸ್ಥೆ (ರಿ.) ಚಿತ್ರದುರ್ಗ ವತಿಯಿಂದ ಕಳೆದ ಹತ್ತು ದಿನಗಳಿಂದ ಆಯೋಜಿಸಿದ್ದ ಮಕ್ಕಳ ಉಚಿತ ಬೇಸಿಗೆ ಶಿಬಿರ ಬಾಲಗೋಕುಲ-2024 ಶುಕ್ರವಾರ ಸಮಾರೋಪಗೊಂಡಿತು. ಅದರ ಅಂಗವಾಗಿ ನಗರದ ತುರುವನೂರು ರಸ್ತೆಯ ಶ್ರೀ ಪ್ರಸನ್ನವೆಂಕಟೇಶ್ವರ ಸ್ವಾಮಿ ದೇವಸ್ಥಾನ ಆವರಣದಲ್ಲಿ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ಮುಕ್ತಾಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು ಯೋಗ ಶಿಕ್ಷಣ ಸಂಸ್ಥೆಯ ಗೌರವಾಧ್ಯಕ್ಷ ಆರ್.ಸತ್ಯಣ್ಣ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಹತ್ತು ದಿನಗಳ ಈ ಉಚಿತ ಶಿಬಿರವು ಮಕ್ಕಳ ಸುಪ್ತ ಪ್ರತಿಭೆಯನ್ನು ಹೊರ ಹಾಕುವ ಕೆಲಸ ಮಾಡಿದೆ ಎಂಬುದು ಇಂದಿನ ಕಾರ್ಯಕ್ರಮದಲ್ಲಿ ಮಕ್ಕಳು ತಮ್ಮ ಅನಿಸಿಕೆಗಳಲ್ಲಿ ಆಡಿದ ಮಾತುಗಳಿಂದಲೇ ತಿಳಿಯುತ್ತದೆ. ಮನೆಯಲ್ಲಿ ಒಬ್ಬ ತಾಯಿ ಒಂದು ಮಗುವನ್ನು ಮಾತ್ರ ನಿಭಾಯಿಸಬಲ್ಲಳು ಆದರೆ ಶಿಕ್ಷಕಿಯಾದವಳು ಶಿಬಿರದ ಎಲ್ಲಾ ಮಕ್ಕಳನ್ನೂ ತಮ್ಮ ಸ್ವಂತ ಮಕ್ಕಳಂತೆ ನೋಡಿಕೊಂಡು ಸಂಸ್ಕಾರವಂತರನ್ನಾಗಿಸುವುದು ಬಹುದೊಡ್ಡ ಜವಾಬ್ದಾರಿಯಾಗಿರುತ್ತದೆ ಅಂತಹ ಜವಾಬ್ದಾರಿಯನ್ನು ಈ




ಶಿಬಿರದಲ್ಲಿ ಎಲ್ಲಾ ಮಾತೆಯರು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ ಎಂಬುದು ಮಕ್ಕಳ ಹಾಗೂ ಪೋಷಕರ ಮಾತುಗಳು ಸಾಕ್ಷೀಕರಿಸಿದೆ. ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಿವೃತ್ತ ಪೋಲೀಸ್ ಅಧಿಕಾರಿ ಹಾಗೂ ಸಂಸ್ಥೆಯ ನಿರ್ದೇಶಕರೂ ಆದ ಮಲ್ಲಿಕಾರ್ಜುನಚಾರ್ ಮಾತನಾಡಿ ಟಿ.ವಿ., ಮೊಬೈಲ್ ಕಾರಣದಿಂದ ವಸ್ತು ನಿಷ್ಠ ಪ್ರಪಂಚವನ್ನೇ ಮರೆತು ಬಿಟ್ಟಿರುವ, ಇಂಥಾ ಸಂದರ್ಭದಲ್ಲಿಯೂ ಬಿಡುವು ಮಾಡಿಕೊಂಡು ನಿಗದಿಗಿಂತ ಹೆಚ್ಚಿನ ಮಕ್ಕಳು ಈ ಶಿಬಿರದಲ್ಲಿ ಭಾಗವಹಿಸಿ ಬೇರೆ ಬೇರೆ ವಿಭಾಗದಲ್ಲಿ ಅನುಭವವನ್ನು ಆಸ್ವಾದಿಸಿದ್ದು ಈ ಶಿಬಿರದ ಯಶಸ್ಸನ್ನು ತೋರಿಸುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು.

ಇದೇ ವೇದಿಕೆಯಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತೋತ್ಸವ ಆಚರಿಸಲಾಯಿತು. ಸಮಾಜ ಸೇವಕಿ ಶ್ರೀಮತಿ ಶೈಲಜಾರೆಡ್ಡಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಆರತಿ ಬೆಳಗಿ ಪೂಜೆಯನ್ನು ಸಲ್ಲಿಸಿ ಮಾತನಾಡಿದರು ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವಣ್ಣನವರ ಆದರ್ಶ ಜೀವನ ನಮಗೆಲ್ಲಾ ಮಾದರಿಯಾಗಿದ್ದು, ಪ್ರತಿಯೊಬ್ಬ ಮಕ್ಕಳೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬಸವಣ್ಣನವರ ವಚನಗಳು ಕನ್ನಡ ಸಾಹಿತ್ಯದ ವಿಶಿಷ್ಟ ರೂಪವಾಗಿದ್ದು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಇಂದಿನ ಮಕ್ಕಳಿಗೆ ಬಸವಣ್ಣನವರ ಜೀವನ ಆದರ್ಶ ಅವರ ವಚನಗಳನ್ನು ತಿಳಿಸಿಕೊಡುವುದು ತು5 ಅವಶ್ಯಕವಾಗಿದೆ ಎಂದು ಅಭಿಪ್ರಾಯ ಪಟ್ಟರು.ಎಂಭತ್ತಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದ ಮಕ್ಕಳು ವಿವಿಧ ಸಾಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನೀಡಿದರು ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಭಾರತೀಯ ಯೋಗ ಶಿಕ್ಷಣ ಸಂಸ್ಥೆ ವತಿಯಿಂದ ಪ್ರಮಾಣಪತ್ರ ಹಾಗೂ ಉಡುಗೊರೆಯನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಿಬಿರದ ಆಯೋಜಕರಾದ ರವಿ ಕೆ.ಅಂಬೇಕರ್, ಶಿಬಿರದ ಶಿಕ್ಷಕಿಯರಾದ ಶ್ರೀಮತಿ ನಾಗಲತಾ, ಅಂಬುಜಾಕ್ಷಿ, ನಿರ್ಮಲಾ, ಶೈಲಜಾ, ರೇಣುಕಾ ಹಿರಿಯ ಯೋಗ ಸಾಧಕಿ ಶ್ರೀಮತಿ ವನಜಾಕ್ಷಮ್ಮ ಬಾಲಗೋಕುಲ ಜಿಲ್ಲಾ ಪ್ರಮುಖರಾದ ದೇವರಾಜ್ ಕೋಟ್ಲ, ತಿಪ್ಪೇರುದ್ರಪ್ಪ, ವಿಶ್ವನಾಥ್ ಭಾಗವಹಿಸಿದ್ದರು.

# ದಾದಿಯರ ಸೇವೆ ಪ್ರಶಂಸನೀಯ: ಡಾ.ಜಯಕುಮಾರ್

▪ **ಜನಾಶಯಪ್ರಭ ಚಳ್ಳಕೆರೆ**

ಪ್ರತಿಯೊಬ್ಬ ವ್ಯಕ್ತಿಯ ಆರೋಗ್ಯದ ಬಗ್ಗೆ ಗಮನಹರಿಸಿ ಅವನಿಗೆ ಸೂಕ್ತ ಚಿಕಿತ್ಸೆ ನೀಡಿ ಅವನನ್ನು ಗುಣಮುಖನನ್ನಾಗಿ ಮಾಡುವ ವೈದ್ಯರ ಸೇವೆಯ ಜೊತೆಗೆ ದಾದಿಯರೂ ಸಹ ರೋಗಿಗಳ ಆರೈಕೆಯಲ್ಲಿ ಹೆಚ್ಚು ಜಾಗ್ರತೆ ವಹಿಸುತ್ತಾರೆ. ದಾದಿಯರ ಸೇವಾ ಕಾರ್ಯದ ಬಗ್ಗೆ ಸಮಾಜಕ್ಕೆ ಮೆಚ್ಚುಗೆ ಇದೆ ಎಂದು ರೋಟರಿ ಕ್ಲಬ್ ಹಿರಿಯ ಸದಸ್ಯ ಡಾ.ಕೆ.ಎಂ.ಜಯಕುಮಾರ್ ತಿಳಿಸಿದರು.

ಅವರು, ನಗರದ ಬಾಪೂಜಿ ಆರ್ಯುವೇದಿಕ್ ಮೆಡಿಕಲ್ ಕಾಲೇಜು ಆವರಣದಲ್ಲಿ ವಿಶ್ವ ತಾಯಂದಿರ ದಿನಾಚರಣೆ ಮತ್ತು ಶುಶ್ರೂಷಕಿಯರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿವರ್ಷ ಈ ಕಾರ್ಯವನ್ನು ಹಮ್ಮಿಕೊಳ್ಳುವ ಮೂಲಕ ದಾದಿಯರ ಸೇವಾ ಕಾರ್ಯವನ್ನು ಪ್ರಶಂಸಿಸಲಾಗುವುದು. ವೈದ್ಯರಷ್ಟೇ ಜವಾಬ್ದಾರಿಯುತವಾಗಿ ದಾದಿಯರು ಕಾರ್ಯನಿರ್ವಹಿಸುತ್ತಾರೆ. ಎಂತಹ ಸಂದರ್ಭದಲ್ಲೂ ಆವೇಷಕ್ಕೆ ಒಳಗಾಗದೆ ರೋಗಿಗಳು ಗುಣಮುಖರಾಗುವ ಕಾರ್ಯವನ್ನು



ದಾದಿಯರು ಮಾಡುತ್ತಾ ಬಂದಿದ್ದಾರೆ. ದಾದಿಯರ ಸೇವಾ ಕಾರ್ಯ ಪ್ರಶಂಸನೀಯವೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೋಟರಿಕ್ಲಬ್ ಅಧ್ಯಕ್ಷ ಕೆ.ನಾಗೇಶ್ ಮಾತನಾಡಿ, ವಿಶ್ವ ತಾಯಂದಿರ ದಿನಾಚರಣೆ ಜೊತೆಯಲ್ಲೇ ದಾದಿಯರ ದಿನಾಚರಣೆ ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ. ಕೆಲವೊಂದು ಸಂದರ್ಭಗಳಲ್ಲಿ ದಾದಿಯರು ಮಾಡುವ ಸೇವಾ ಕಾರ್ಯಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ. ಇವರ ಸೇವೆಯನ್ನು ಎಲ್ಲರೂ ಸದಾಸ್ಮರಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಎಸ್.ಜಯಪ್ರಕಾಶ್, ಕೆ.ಎ.ಮೂರ್ತಪ್ಪ, ಡಾ.ನಾಗರಾಜು, ಡಾ.ಎಲ್.ಎಸ್.ವೀರೇಶ್, ಮುರುಗೇಶ್ ಮುಂತಾದವರು ಭಾಗವಹಿಸಿದ್ದರು.

# ಮಳೆ ಗಾಳಿಗೆ ಶಾಲಾ ಕಟ್ಟಡದ ಶೀಟ್ ಹಾರಿ ಮನೆಗಳ ಮೇಲೆ ಬಿದ್ದಿರುವುದು

» **ಚಿತ್ರದುರ್ಗ**

ಶುಕ್ರವಾರ ರಾತ್ರಿ ಸುರಿದ ಮಳೆ ಗಾಳಿಗೆ ಮಲ್ಲಾಪುರದಲ್ಲಿರುವ ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆ, ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಾಗೂ ಬಾಪೂಜಿ ಸಮನ್ವಯ ಪ್ರೌಢಶಾಲೆ ಕಟ್ಟಡದ ಮೇಲಿನ ಶೀಟ್‌ಗಳು ಕಬ್ಬಿಣದ ಹ್ಯಾಂಗ್ಲರ್‌ಗಳ ಸಮೇತ ಹಾರಿ ಬಿದ್ದಿರುವುದರಿಂದ ಸುಮಾರು ಏಳೆಂಟು ಮನೆಗಳು ಜಖಂಗೊಂಡಿವೆ.

ಮಲ್ಲಾಪುರ ಗ್ರಾಮದಿಂದ ಶಾಲೆ ಸ್ವಲ್ಪ ದೂರದಲ್ಲಿದ್ದರು ಹ್ಯಾಂಗ್ಲೆರಗಳ ಸಮೇತ ಹಾರಿ ಮನೆಗಳ ಮೇಲೆ ಬಿದ್ದಿದೆಯೆಂದರೆ ಎಂತಹ ರಭಸದ ಮಳೆ ಗಾಳಿ ಬಂದಿರಬಹುದು ಎಂದು ಗ್ರಾಮಸ್ಥರು ಸೋಜಿಗಪಟ್ಟುಕೊಳ್ಳುತ್ತಿದ್ದಾರೆ. ಎ.ಕೆ. ಕಾಲೋನಿಯಲ್ಲಿರುವ ಯಲ್ಲಪ್ಪನ ಮಗ ನಿತಿನ್ ತಲೆಗೆ ಗಾಯವಾಗಿದ್ದು, ಹೊಲಿಗೆ



ಹಾಕಲಾಗಿದೆ. ಮಹಿಳೆ ಕೃಷ್ಣಮ್ಮಳ ತಲೆಗೂ ಪೆಟ್ಟಾಗಿ ಹೊಲಿಗೆ ಬಿದ್ದಿದೆ. ಸದಾನಂದಮೂರ್ತಿ ಎಂಬುವರ ಮನೆ ಮೇಲೆ ಶೀಟ್ ಬಿದ್ದಿದ್ದು, ಅಡುಗೆ ಮನೆ ಸೇರಿದಂತೆ ಇತರೆ ಕಡೆ ಹಾನಿಯಾಗಿದೆ. ಲೋಕೇಶ್ವರಯ್ಯ, ಲಲಿತಮ್ಮ, ನಾಗರಾಜಯ್ಯ, ಮೈಲಾರಪ್ಪ ಇವರ ಮನೆಗಳಿಗೂ ಹಾನಿಯಾಗಿದೆ. ದೊಡ್ಡ ಶೀಟ್‌ವೊಂದು ಖಾಲಿ ಜಾಗದಲ್ಲಿ ಬಿದ್ದಿರುವುದರಿಂದ ಯಾವುದೇ ಜೀವ ಹಾನಿಯಾಗಿಲ್ಲ. ರಾತ್ರಿ ವೇಳೆಯಾಗಿದ್ದರಿಂದ ಮಲಗಿದ್ದವರು ಶೀಟ್‌ಗಳು ಬಿದ್ದ ಶಬ್ದಕ್ಕೆ ಹೆದರಿ ಹೊರಗೆ ಓಡಿ ಹೋಗಿದ್ದಾರೆ.

ತಹಶೀಲ್ದಾರ್ ಡಾ.ನಾಗವೇಣಿ, ಗ್ರಾಮಾಂತರ ಪೋಲೀಸರು ಸ್ಥಳಕ್ಕೆ ಭೇಟಿ ನೀಡಿ ನಿರಾಶ್ರಿತರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿದ್ದಾರೆ.






## ಮಾನವೀಯತೆಯ ಭಾವದ ನೆಲೆಯೆ

# ಬಸವಣ್ಣನವರ ವಚನಗಳು

ಅಣ್ಣ ಬಸವಣ್ಣಭಾರತದ 12ನೇ ಶತಮಾನದ ತತ್ವಜ್ಞಾನಿ, ವಚನಗಾರ ಮತ್ತು ಸಮಾಜ ಸುಧಾರಕರಾಗಿದ್ದವರು.ತಮ್ಮ ವಚನಗಳ ಮೂಲಕ ಲಿಂಗ ತಾರತಮ್ಯ, ಸಾಮಾಜಿಕಅಸಮಾನತೆ, ಮೂಢನಂಬಿಕೆಗಳನ್ನು ಕಟುವಾಗಿ ವಿರೋಧಿಸಿ ಸಾಮಾಜಿಕಅರಿವು ಮೂಡಿಸಿದವರು.ಬಸವಣ್ಣಇಷ್ಟಲಿಂಗವನ್ನು(ಶಿವಲಿಂಗ)ಪರಿಚಯಿಸಿ ಇದನ್ನುಎಲ್ಲರು ಧರಿಸಿ ಪೂಜಿಸಬಹುದುಎಂದುಆಧ್ಯಾತ್ಮಿಕ ಮಾರ್ಗವನ್ನು ಸರಳಗೊಳಿಸಿದರು.ಅವರುಅನುಭವ ಮಂಟಪವನ್ನು ಸ್ಥಾಪಿಸಿ, ಎಲ್ಲಾ ವರ್ಗದ ಸಾಮಾಜೋ–ಆರ್ಥಿಕ ಹಿನ್ನೆಲೆಯ ಪುರುಷ ಮತು ಮಹಿಳೆಯರಿಗೆ ಪ್ರಾಪಂಚಿಕ ಮತ್ತುಆಧ್ಯಾತ್ಮಿಕ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ಮಾಡಿಕೊಟ್ಟರು. ಹಾಗಾಗಿ ಬಸವಣ್ಣನವರನ್ನು ಭಕ್ತಿ ಭಂಡಾರಿ, ಬಸವೇಶ್ವರಎಂದುಕರೆಯಲಾಗುತ್ತದೆ ಮತ್ತು ಸರ್ಅರ್ಥರ್ ಮೈಲಾರ್ಅವರುಕರ್ನಾಟಕದ ಮಾರ್ಟಿನ್ ಲೂಥರ್ಎಂದುಕರೆದಿದ್ದಾರೆ.ಬಸವಣ್ಣತನ್ನ 8ನೇ ವಯಸ್ಸಿನಲ್ಲಿಯೇ ವೈಧಿಕ ಸಂಸ್ಕೃತಿಯ ಜನಿವಾರವನ್ನುತನಗಿಂತ ಹಿರಿಯಳಾದ ಅಕ್ಕ ನಾಗಮ್ಮಳಿಗೆ ಏಕೆ ಕೊಡಲು ಬರುವುದಿಲ್ಲ ಎಂದು ಪ್ರಶ್ನೆ ಮಾಡುತ್ತಾರೆ.ಬಸವಣ್ಣ ಪುರುಷ/ಮಹಿಳೆ ಅಸಮಾನತೆಯನ್ನು ವಿರೋಧಿಸುತ್ತಾರೆ.ಆಡು ಭಾಷೆಯಲ್ಲಿ ಸರಳವಾಗಿ ಜನರಿಗೆಅರ್ಥವಾಗುವಂತೆ ವಚನಗಳನ್ನು ರಚನೆ ಮಾಡಿ, ಸಮಾಜದಲ್ಲಿ ಹಲವಾರು ಬದಲಾವಣೆಗಳನ್ನು ತಂದರು.ವರ್ಣ, ವರ್ಗ, ಲಿಂಗ ಬೇಧವನ್ನುತಮ್ಮ ವಚನಗಳ ಮೂಲಕ ಧಿಕ್ಕರಿಸಿದವರು.

ಕಾಯಕ ವರ್ಗವೇ ಶ್ರೇಷ್ಠ ವರ್ಗ, ಕಾಯಕಜೀವಿಯಾಗಿಉತ್ಪಾದನೆಯಲ್ಲಿತೊಡಗದಂತಹ ವ್ಯಕ್ತಿ (ಉದ್ಯೋಗ)ಸಮಾಜಕ್ಕೆಉಪಯೋಗವಲ್ಲಹಾಗಾಗಿಕಾಯಕದಲ್ಲಿ ನಂಬಿಕೆ ಇಟ್ಟುಕೊಳ್ಳಬೇಕು ಎಂಬ ಸಂದೇಶವನ್ನುಜಗತ್ತಿಗೆ ಸಾರಿದರು.ಭಾರತದಲ್ಲಿವಿವಿಧಜಾತಿಯಎಲ್ಲಾಕಾಯಕಜೀವಿಗಳು ಒಂದು ವರ್ಗವಾಗಿರೂಪಗೊಂಡಿದ್ದು ಶರಣರ ಸಂಕುಲದಲ್ಲಿ.ವಚನಗಳು ಶರಣರಜೀವನಕ್ಕೆ ಹಿಡಿದಕೈಗನ್ನಡಿ ಹಾಗುಶರಣರಅನುಭಾವದಅಕ್ಷರರೂಪ ಇವು ಶರಣರದಾರಿಯಲ್ಲಿ ಸಾಗ ಬಯಸುವ ಪ್ರತಿಯೊಬ್ಬರಿಗೂದಾರಿ ದೀಪಗಳು.ಮೌಢ್ಯದ ಕೊಳೆಯನ್ನು ತೊಳೆಯುವ, ಅಂಧಕಾರದ ಮನಕ್ಕೆ ಅಂಟಿದ ಕಿಲುಬನ್ನು ತೊಳೆದು ಸ್ವಚ್ಛಗೊಳಿಸಿ ಫಳಫಳ ಹೊಳೆಯುವಂತೆ ಮಾಡಬಲ್ಲ ವಿಚಾರ ತರಂಗಿಣಿಗಳು.ಅಂತಹ ವಚನಗಳನ್ನು ಓದಿ ಸರಿಯಾಗಿಯಥಾವತ್ತಾಗಿಅರ್ಥ ಮಾಡಿಕೊಂಡು ಅವುಗಳ ಸಾರವನ್ನುಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿರುವುದು ಇಂದಿನ ಮನಕುಲದಅಗತ್ಯತೆ.



ಬಸವಣ್ಣನವರುಇಡೀ ವಿಶ್ವಕ್ಕೆ ಪ್ರಜಾಪ್ರಭುತ್ವ ಪರಿಕಲ್ಪನೆಗೆ 12ನೇ ಶತಮಾನದಲ್ಲಿ ಅಡಿಪಾಯ ಹಾಕಿಕೊಟ್ಟರು.ಅವರಅನುಭವ ಮಂಟಪದ ಆಲೋಚನೆ ಇಂದಿಗೂ ಪ್ರಸ್ತುತವಾಗಿದೆ.ಇದರಿಂದಎಲ್ಲರನ್ನು ಶಿಕ್ಷಿತರನ್ನಾಗಿ ಮಾಡಿ ಸರ್ವ ವರ್ಗದವರನ್ನುಒಂದೆಡೆತರುವ ಪ್ರಯತ್ನ ಮಾಡಲಾಗಿತ್ತು. ಈ ಕೆಳಗಿನ ಕೆಲವು ಆಯ್ದ ವಚನಗಳ ಮೂಲಕ ಅದರ ಒಳಾರ್ಥವನ್ನು ತಿಳಿಯಬಹುದಾಗಿದೆ

**ಇವನಾರವ, ಇವನಾರವ, ಇವನಾರವಎಂದೆನಿಸದಿರಯ್ಯ.**
**ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದೆನಿಸಯ್ಯ.**
**ಕೂಡಲ ಸಂಗಮದೇವಾ ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ.**

ಇವನಾರವ,ಇವನಾರವ,ಅಂದರೆಇವನುಯಾವಜಾತಿಯವನು, ಅವನು ಯಾವಜಾತಿಯವನುಎಂದುಜಾತಿದೃಷ್ಟಿಯಿಂದ ನೋಡದೆ ಇವ ನಮ್ಮವ ಇವ ನಮ್ಮವಅಂದರೆ ಇವನೂ ನಮ್ಮವನು, ಅವನೂ ನಮ್ಮವನುಎಂದುಎಲ್ಲರನ್ನೂ ನಮ್ಮವರು ಎಂಬ ವಿಶಾಲಭಾವದಿಂದ ನೋಡುವ ಮಾನವೀಯದೃಷ್ಟಿಯಿಂದ ನಿಮ್ಮಕುಲದವರ ಮನೆಯ ಮಗನನ್ನಾಗಿ ಪರಿಗಣಿಸಬೇಕೆಂದು ಬೇಡಿಕೊಂಡಿದ್ದಾರೆ ಹಾಗಾಗಿ ಜಾತಿರಹಿತಆದರ್ಶ ಸಮಾಜದ ಕನಸು ಕಂಡಅವರುತಮ್ಮನ್ನೆಕುರಿತು ಹೇಳಿಕೊಂಡ ವಚನವಿದು.

**ಹುತ್ತವ ಬಡಿದರೆಉರಗ ಸಾವುದೇ?**
**ಘೋರತಪವ ಮಾಡಿದರೇನು**
**ಅಂತರಂಗಆತ್ಮಶುದ್ಧಿಯಿಲ್ಲದವರನೆಂತು**
**ನಂಬುವನಯ್ಯಾಕೂಡಲಸಂಗಮದೇವ?**

ನಮ್ಮೊಳಗಿರುವ ಅನಿಷ್ಟಗಳನ್ನು (ಮದ, ಮೋಹ, ಲೋಭ, ಅಸುಯೆ, ಅಸಮಾನತೆ) ತೆಗೆದುಹಾಕದೆ, ನಮ್ಮಅಂತರಂಗದ ಶುದ್ಧಿಯಾಗದೇ ಕೇವಲ ತೋರಿಕೆಗೆ ಬಹಿರಂಗದ ಶುದ್ಧಿ ಮಾಡಿಕೊಂಡರೆ (ಪೂಜೆ ಪುನಸ್ಕಾರಗಳು ಮಾಡಿದರೆ)ಅದರ ಫಲವಿಲ್ಲ ಎಂಬ ಸೂಕ್ತತೆಯನ್ನು ಈ ಮೇಲಿನ ವಚನದಿಂದ ತಿಳಿಸಿದ್ದಾರೆ.

**ಲೋಕದಡೊಂಕ ನೀವೇಕೆ ತಿದ್ದುವಿರಿ?**
**ನಿಮ್ಮ ನಿಮ್ಮತನವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆಮನೆಯದುಖಕ್ಕೆ ಅಳುವವರ**
**ಮೆಚ್ಚ ಕೂಡಲಸಂಗಮದೇವ...**

ಬೇರೆಯವರ ತಪ್ಪುಗಳನ್ನು ಹುಡುಕುವದರ ಬದಲು ನಮ್ಮೊಳಗಿನ ತಪ್ಪುಗಳನ್ನು ಹುಡುಕಿ ಅವುಗಳನ್ನು ಸರಿಪಡಿಸಿ ನಮ್ಮತನು ಮನಗಳನ್ನು ಸರಿಪಡಿಸಿಕೊಂಡಲ್ಲಿ ಅದೇದೇವರನ್ನು ಮೆಚ್ಚಿಸುವದಾರಿ, ಇದರಿಂದಇತರರು ನಮ್ಮನ್ನು ನೋಡಿಅವರವರೇಅವರ ಶುದ್ಧಿಯನ್ನು ಮಾಡಿಕೊಳ್ಳುತ್ತಾರೆ ಎಂಬ ಆದರ್ಶಅಭಿಪ್ರಾಯವನ್ನು ಸಮಾಜದಜನತೆಗೆ ನೀಡಿದ್ದಾರೆ. ಬೇರೆಯವರಿಗೆ ತಿಳಿಹೇಳುವ ಮೊದಲು ನಾವು ಸರಿಯೇಎನ್ನುವ ಅವಲೋಕನವು ಸೂಕ್ತ ಎಂಬುದು ಬಸವಣ್ಣನವರ ಸಲಹೆ.

**ಡದಯವಿಲ್ಲದಧರ್ಮವದೇವುದಯ್ಯಾ**
**ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ**
**ದಯವೇಧರ್ಮದ ಮೂಲವಯ್ಯಾ**
**ಕೂಡಲಸಂಗಮದೇವನಂತಲ್ಲನಯ್ಯಾ...**

ಧರ್ಮಾಂಧತೆಯಿಂದ ನರಳುತ್ತಿರುವ ಸಮಾಜಕ್ಕೆ, ಧರ್ಮ ಹೇಗಿರಬೇಕುಎಂಬುದನ್ನು ತೋರಿಸಿಕೊಟ್ಟಿದ್ದಾರೆ. ದಯೆಯಿರದಧರ್ಮಧರ್ಮವೇಅಲ್ಲ, ಧರ್ಮಕ್ಕೆ ಮೂಲ ಆಧಾರವೇದಯೆ, ದಯೆ ಮನುಷ್ಯರಿಗಲ್ಲದೇ ಪ್ರಾಣಿಗಳಿಗೂ ಹಾಗೂ ಸಕಲ ಜೀವಿಗಳಿಗೂ ತೋರಬೇಕುಅಂತಹಧರ್ಮವನ್ನುಎಲಾ ಮನುಷ್ಯರುಆಚರಿಸಬೇಕುಎಂಬುದು ಬಸವಣ್ಣನವರ ವಚನದ ತಿರುಳು.

**ಮನಮನ ಬೆರೆಸಿದಲ್ಲಿ ತನುಕರಗದಿದ್ದಡೆ,**
**ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,**
**ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,**
**ನುಡಿವಲ್ಲಿ ಗದ್ಗದಂಗಳು ಪೂಣ್ದಿದ್ದಡೆ;**
**ಕೂಡಲಸಂಗಮದೇವರ ಭಕ್ತಿಗಿದುಚಿಹ್ನ?**
**ಎನ್ನಲ್ಲಿ ಇವಿಲ್ಲಾಗಿ, ಆನು ಡಂಬಕಕಾಣಿರೇ!**

ಬಸವಣ್ಣನವರು ಮಾನವರ ನಡುವೆಇರಬೇಕಾದ ಮಾನವೀಯತೆ ಮತ್ತು ಹೃದಯ ವೈಶಾಲ್ಯತೆಯ ಅಂಶಗಳು ಇಲ್ಲದಿದ್ದರೆಅಂತಹ ಭಕ್ತಿ ನಾಟಕೀಯಎಂಬುದನ್ನು ಹೀಗೆ ಹೇಳುತ್ತಾರೆ.ಮನುಷ್ಯರ ನಡುವೆ ಮನಸ್ಸುಗಳು ಬೆರೆತಾಗತನುಕರಗುವಂತಹಅಂತಃಕರಣವಿರಬೇಕು.ಪರಸ್ಪರ ಸ್ಪರ್ಶಗಳಲ್ಲಿ ಪುಳಕವಿರಬೇಕು. ಒಬ್ಬರೊಬ್ಬರನ್ನುಕಂಡಾಗಕಣ್ಣೀರು ಸುರಿಯುವಂತಹ ಭಾವುಕತೆಗಳಿರಬೇಕು.ಮಾತನಾಡುವಾಗಗಂಟಲುತೇವಗೊಂಡಿರಬೇಕು.ಇಂತಹಆತ್ಮೀಯತೆಯನ್ನು ಹೊಂದಿರುವುದೇ ಭಕ್ತಿಯಗುರುತು, ಅಂತಃಕರಣ ಭಾವುಕತೆ, ಆತ್ಮೀಯತೆ, ಪುಳಕಗಳಂತಹ ಭಾವಗಳನ್ನು ಹೊಂದಿರದೆಕೃತಕವಾಗಿ ನಡೆದುಕೊಳ್ಳುವವನು ಮೋಸಗಾರನೇ (ಡಾಂಭಿಕ) ಹೊರತುಉತ್ತಮ ಭಕ್ತನಾಗಿರಲಾರಎಂದು ಹೇಳುವ ಮೂಲಕ ಮಾನವೀಯ ಗುಣಗಳೇ ಭಕ್ತಿಯ ಮೂಲ ಎಂಬುದನ್ನು ಬಸವಣ್ಣನವರು ಹೇಳುತ್ತಾರೆ.

**ಒಲೆಹತ್ತಿಉರಿದಡೆ ನಿಲಬಹುದಲ್ಲ**
**ಧರೆಹತ್ತಿಉರಿದಡೆ ನಿಲಲುಬಾರದು,**
**ಏರಿ ನೀರುಂಬಡೆ, ಬೇಲಿ ಕೆಯ್ಯ, ಮೇವಡೆ,**
**ನಾರಿತನ್ನ ಮನೆಯಲ್ಲಿ ಕಳುವಡೆ,**
**ತಾಯ ಮೊಲೆವಾಲು ನಂಜಾಗಿಕೊಲುವಡೆ,**
**ಇನ್ನಾರಿಗೆದೂರುವೆಕೂಡಲಸಂಗಮದೇವಾ!**

ಕಾಯಬೇಕಾದವರೆಕೊಲ್ಲಲು ನಿಂತರೆ ನಾವು ಯಾರಿಗೆದೂರಲು ಸಾಧ್ಯ, ಬದುಕಲು ಸಾಧ್ಯ?ಸಾಧ್ಯವಿಲ್ಲ ಎಂಬುದನ್ನು ಈ ರೀತಿ ವಿವರಿಸಲಾಗಿದೆ.ಒಲೆಅತ್ತಿಉರಿದರೆ ನಿಲ್ಲಲು ಬೇರೆಜಾಗವಿದೆ ನಿಲ್ಲಬಹುದು ಉಳಿಯಬಹುದು. ಆದರೆ ಭೂಮಿಯೇ ಹತ್ತಿ ಉರಿಯಲಾರಂಭಿಸಿದರೆ ನಿಲ್ಲಲುಜಾಗ ಸಿಗುವುದೇ ಬದುಕಲು ಸಾಧ್ಯವೇ, ಕೆರೆಯ ನೀರನ್ನು ಸಂರಕ್ಷಿಸಲೆಂದುಏರಿಯನ್ನುಕಟ್ಟಿದರೆ ಆ ಏರಿಯೇಕೆರೆಯ ನೀರನ್ನೆಲ್ಲಕುಡಿದರೆ ನೀರನ್ನು ಉಳಿಸಲು ಸಾಧ್ಯವೇ, ಮನೆಯನ್ನು ನೋಡಿಕೊಳ್ಳಬೇಕಾದ ಹೆಂಗಸೆ ಮನೆಯಲ್ಲಿ ಕಳ್ಳತನ ಮಾಡಿದರೆಅದನ್ನುತಡೆಯಲು ಸಾಧ್ಯವೇ, ಅಮೃತ ಸಮಾನವಾದತಾಯಿಯ ಹಾಲೇ ವಿಷವಾಗಿ ಕೊಂದರೆ ಮತ್ತಾರು ನಮ್ಮನ್ನು ಉಳಿಸಲು ಸಾಧ್ಯ, (ರಕ್ಷಕರೇ ಭಕ್ಷಕರಾದರೆಇಂತಹ ವಿಘಟನೆಗಳು ಸಂಭವಿಸುತ್ತವೆ) ಇದನ್ನುಯಾರ ಬಳಿ ದೂರಲು ಸಾಧ್ಯ. ಆದ್ದರಿಂದದೇವರಿಗೆ ಮೊರೆ ಹೋದ ನಿಮ್ಮನ್ನುಆತನೇ ಉಳಿಸಬೇಕೇ ಹೊರತುಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳುತ್ತಾರೆ.

ಇಂತಹ ವಚನಗಳನ್ನು ನೀಡುವ ಮೂಲಕ ಮೌಢ್ಯಡಾಂಭಿಕ ಆಚರಣೆಗಳನ್ನು ತೀಕ್ಷ್ಣವಾಗಿ ವಿರೋಧಿಸಿದ್ದಾರೆ.ಬಸವಣ್ಣನವರು ಸಮಾನತೆ ಮತ್ತುಜಾತ್ಯಾತೀತತೆಯಆಧಾರದ ಮೇಲೆ ಕಟ್ಟಬಯಸಿದ ಸಮಾಜ ಸರ್ವಕಾಲಿಕಚಿಂತನೆಯಿಂದಕೂಡಿರುವಂಥದ್ದು.ಇವರಅನುಭವ ಮಂಟಪ ವಿಶ್ವದ ಮೊದಲ ಸಂಸತ್ತು ಮಾತ್ರವಲ್ಲ ಮೊದಲ ಆಧ್ಯಾತ್ಮ ವಿಶ್ವವಿದ್ಯಾಲಯವುಆಗಿತ್ತು.ಸಜಲ ಜೀವಾತ್ಮಕ್ಕೆ ಲೇಸನ್ನು ಬಯಸುವ ವಚನಗಳು ಬಸವಣ್ಣನದ್ದಾಗಿದ್ದುವು ಸಂವಿಧಾನದ ಜೀವಾಳವೇ ಆಗಿರುವ ಬಸವಣ್ಣನವರ ವಚನಗಳನ್ನು ಅನುಸಂಧಾನಿಸುವುದು ಏಕ ಕಾಲಕ್ಕೆ ನಮ್ಮ ಸಂವಿಧಾನವನ್ನೂಅಂತಾರಾಷ್ಟ್ರೀಯ ಹಕ್ಕುಗಳನ್ನು ಗೌರವಿಸಿದಂತೆಯೂ ಆಗುತ್ತದೆ.ಆಧುನಿಕ ಬದುಕಿಗೂ ಮುಖಾಮುಖಿಯಾಗುವ ಬಸವಣ್ಣನವರ ವಚನಗಳು ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಂಸ್ಕೃತಿ, ಸಾಹಿತ್ಯಗಳ ಸಂಹಿತೆಎಂದರೆತಪ್ಪಿಲ್ಲ.

ಕಾಯಕವೇಕೈಲಾಸವೆಂದು ತಿಳಿದು, ಹೆಣ್ಣು ಮಕ್ಕಳನ್ನು ಸಮಾನತೆಯಿಂದಕಂಡು, ಜಾತಿಯತೆಯನ್ನುಅನುಸರಿಸದ, ಧರ್ಮಾಂಧತೆಯನ್ನು ಅನುಪಾಲಿಸದ ಸರಳ ಸಜ್ಜನಿಕೆಯಯಾವ ವ್ಯಕ್ತಿಯೂ ಬಸವಣ್ಣನಅನುಯಾಯಿಯೇ ಸರಿ.ಅಂತಹಬಸವಣ್ಣನವರ ಆದರ್ಶಗಳನ್ನು ಪಾಲನೆ ಮಾಡಿದರೆಆದರ್ಶ ಶರಣರ ಸಮುದಾಯಗಳನ್ನು ನಿರ್ಮಿಸಿ, ಸಮಾಜದಲ್ಲಿಅಮೂಲಾಗ್ರವಾದ ಬದಲಾವಣೆ ಕಂಡುಕೊಳ್ಳಲು ಸಾಧ್ಯವಿದೆ.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T